# ಉದ್ಯೋಗ ಪರ್ವ

## ಶ್ರೀ ನಾಗೇಶ ಬಾಬುರಾವ್ ಶೆಟ್ಟಿ ಅವರ

## ಅಭಿನಂದನ ಗ್ರಂಥ



ಸಂಪಾದಕರು

- ಡಾ. ಎಸ್. ಟಿ. ಮೇರವಾಡೆ
- ಡಾ. ಆರ್. ವಿ. ಪಾಟೀಲ

Scanned by CamScanner

೧೫. ವಿಶಾಲ ಮನಸ್ಸುಳ್ಳ ನಗುಮುಖದ ನಾಗೇಶ ಶೆಟ್ಟಿಯವರು ೯೯
• ಎಲ್. ಎಚ್. ಕುಲಕರ್ಣಿ

೧೬. ಸಹೋದರತ್ವದ ಸಂಬಂಧ ೧೦೨
• ವ್ಹಿ. ಆಯ್. ಪಾಟೀಲ

೧೭. ನನ್ನ ನೆಚ್ಚಿನ ಮಿತ್ರ ನಾಗೇಶ ಶೆಟ್ಟಿಯವರು ೧೦೪
• ಶ್ರೀ ವಿಜಯಕುಮಾರ ಎಸ್. ಚವ್ಹಾಣ

೧೮. ಶ್ರಮ ಜೀವಿಗಳು ೧೦೬
• ಪ್ರೊ ಆರ್. ಎಚ್. ಬಿದರಿ

೧೯. ಗುಮ್ಮಟ ನಗರಿಯ ಹೆಮ್ಮೆಯ ಎಮ್. ಆರ್ ೧೦೭
• ಶ್ರೀ ವಸಂತರಾವ್ ಕೊರ್ತಿ

೨೦. ಈಜಿ ಜಯಿಸಬೇಕು ೧೧೦
• ಅಲ್ಲಾಬಕ್ಷ ಮಕ್ಬುಲ್ ಬಾಗವಾನ

೨೧. ಎಂ. ಆರ್. ನಂಬರ್-೧ ೧೧೨
• ದತ್ತು ನಿಂಬಾಜಿ ಅಂಜಿಖಾನೆ (ಗವಳಿ)

೨೨. ಯಾರು ಮಾಲಕರೋ ಯಾರು ಕೆಲಸಗಾರರೋ ೧೧೪
• ಸೂರಜ ಸಾಲಿಯಾನ

೨೩. ತಂದೆಯಂತೆ ಮಗ ೧೧೬
• ಅಶೋಕ ಧನರಾಜ ಜೈನ

೨೪. ಇಂತಹ ಸ್ನೇಹಿತರನ್ನು ಪಡೆದ ನಾವೇ ಧನ್ಯರು ೧೧೮
• ಡಾ. ಎಸ್. ಜೆ. ಪವಾರ

೨೫. ಸರಳ ಜೀವಿ ಬಾಬುರಾವ್ ಶೆಟ್ಟಿ ೧೨೦
• ಬಿ. ಎಸ್. ಚಿಕ್ಕಣ್ಣವರ

೨೬. ತುಂಬಿದ ಮನಸ್ಸು ೧೨೧
• ಅನಿಲ ಮುರಿಗೆಪ್ಪ ಕೊಪ್ಪದ

೨೭. ಗ್ರಾಹಕರ ಹಿತ ಬಯಸುವ ಹೋಟೆಲ್ ಎಂ. ಆರ್. ೧೨೩
• ಡಾ. ಮಹಾಂತೇಶ ಬಿರಾದಾರ

೨೮. ಹಸನ್ಮುಖಿ ೧೨೫
• ವಿರೇಶ ಪಟ್ಟಣಶೆಟ್ಟಿ

೨೯. ತನ್ನ ತಾನರಿದ ಶರಣ ೧೨೭
• ಪ್ರೊ. ಎಸ್. ಜೆ. ಜಹಾಗೀರದಾರ

Scanned by CamScanner

# ಇಂತಹ ಸ್ನೇಹಿತರನ್ನು ಪಡೆದ ನಾವೇ ಧನ್ಯರು

● ಡಾ. ಎಸ್. ಜೆ. ಪವಾರ

ಗುರುವಿನಲ್ಲಿ ಭಕ್ತಿ, ಲಿಂಗದಲ್ಲಿ ನಿಷ್ಠೆ
ಜಂಗಮದಲ್ಲಿ ಸುಯಿಧಾನ
ಅರ್ಪಿತದಲ್ಲಿ ಅವಧಾನ
ಪ್ರಸಾದದಲ್ಲಿ ಪರಿಣಾಮ
ಇಂತೆಂದುದು ಕೂಡಲ ಚನ್ನಸಂಗನ ವಚನ ।

**ಈ** ವಚನದಂತೆ ನಾಗೇಶ ಶೆಟ್ಟಿಯವರು ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡಿದ್ದಾರೆ. ವ್ಯಕ್ತಿ, ಭಕ್ತ, ಸಾಧಕ, ಶರಣ ಯಾರೇ ಆಗಿರಲಿ, ತಾವು ಮಾಡುವ ಪ್ರತಿಯೊಂದು ಕಾಯಕ ಶಿವ ಮೆಚ್ಚುವ ಹಾಗೆ ಇರದಿದ್ದರೆ ನಾವು ಮಾಡಿದ ಸ್ವಾರ್ಥ ಕಾರ್ಯಗಳನ್ನು ಮುಂದೆ ನಾವೇ ಅನುಭವಿಸಬೇಕಾಗುತ್ತದೆ ಎಂಬ ಸಂದೇಶವನ್ನು ಅರಿತು ಈ ಹೋರಾಟದ ಜೀವನದಲ್ಲಿ ಬದುಕಬೇಕು. ಈ ಹೋರಾಟದ ಜೀವನ ನಿರಂತರ ಸಾಗುತ್ತಿರುತ್ತದೆ. ಇಂತಹ ಬದುಕಿನಲ್ಲಿ ಯಶಸ್ಸು, ಗೌರವ, ಸನ್ಮಾನ, ಸೋಲು ದೊರೆಯುವುದು ಸಹಜ. ಇದು ಆಯಾ ವ್ಯಕ್ತಿಯ ಇಚ್ಛಾಶಕ್ತಿಯ ಮೇಲೆ ನಿಂತಿರುತ್ತದೆ. ಸಮಾಜದಲ್ಲಿ ಬಹುಮುಖ ಪ್ರತಿಭೆಯ ವ್ಯಕ್ತಿಗಳೂ ಇದ್ದಾರೆ. ಅವರವರ ವ್ಯಕ್ತಿತ್ವದ ಮೇಲೆ, ತಮ್ಮ ಬುದ್ಧಿಶಕ್ತಿಯ ಮೇಲೆ ತಮ್ಮದೇ ಆದ ಪರಿಸರವನ್ನು ನಿರ್ಮಿಸಿಕೊಂಡಿರುತ್ತಾರೆ. ಇಂತಹ ಪರಿಸರದಲ್ಲಿ ಕೀರ್ತಿ, ಗೌರವ, ಸನ್ಮಾನ ದೈವದತ್ತವಾಗಿ ಬರುತ್ತದೆ. ಇದು ಅವರಿಗೆ ಗೊತ್ತಾಗುವದೇ ಇಲ್ಲ. ಇದಕ್ಕೆ ಜೀವಂತ ನಿದರ್ಶನ ಮೈಸೂರ ರೆಸ್ಟೋರೆಂಟ ಮಾಲಕರಾದ ಶ್ರೀ ನಾಗೇಶ ಶೆಟ್ಟಿಯವರು.

ಪ್ರಸ್ತುತ ಸಮಾಜದಲ್ಲಿ ಪರಿವರ್ತನೆಯಾಗುತ್ತಿದೆ. ಜೀವನದಲ್ಲಿಯೂ ಬದಲಾವಣೆಯಾಗುತ್ತಿದೆ. ಜಗತ್ತು ಪ್ರಗತಿಯತ್ತ ಸಾಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ನಾಗೇಶ ಮಾಲಕರು ತಮ್ಮ ವಿಶಿಷ್ಟವಾದ ವ್ಯಕ್ತಿತ್ವ ಮತ್ತು ಅಸ್ತಿತ್ವದೊಂದಿಗೆ ಸಮಾಜದಲ್ಲಿ ಮಾದರಿಯಾಗಿರುವರು. ನನಗೆ ೩೦ ವರ್ಷಗಳಿಂದ ನಾಗೇಶ ಶೆಟ್ಟಿಯವರ ಜೊತೆ ಆತ್ಮೀಯ ಸಂಬಂಧವಿದೆ. ಬಾಲ್ಯದಲ್ಲಿ ಇವರ ಜೊತೆ ಕ್ರಿಕೆಟ್ ಆಡಿದ್ದೇವೆ. ನಾಗೇಶ



Scanned by CamScanner

ಅವರು ಒಳ್ಳೆಯ ಕ್ರಿಕೆಟ್ ಆಟಗಾರರೂ ಕೂಡ ಹೌದು. ದಿನನಿತ್ಯ ಭೆಟ್ಟಿಯಾಗಿ ಕಷ್ಟ-ಸುಖ ಹಂಚಿಕೊಂಡು ಆತ್ಮೀಯರಾಗಿದ್ದೇವೆ. ಸಾಹಿತ್ಯಿಕ ಚಟುವಟಿಕೆಯನ್ನು, 'ಸೃಜನ' ಬಳಗದವರೆಲ್ಲ ಮೈಸೂರ ರೆಸ್ಟೋರೆಂಟದ ೨ನೇ ಮಹಡಿಯ ರೂಮನಲ್ಲಿ ಸೇರಿ ಕಾರ್ಯ ನಿರ್ವಹಿಸುತ್ತೇವೆ. ನಾನು ಪಿಎಚ್.ಡಿ. ಪದವಿ ಪಡೆದಾಗ ನಾಗೇಶ ಮಾಲಕರು ಹಾಗೂ ಇಡೀ ಕುಟುಂಬದವರು ತುಂಬಾ ಸಂತೋಷಪಟ್ಟಿದ್ದಾರೆ. ಅದ್ದೂರಿಯಾಗಿ ಪ್ರೀತಿಯ ಸನ್ಮಾನ ಮಾಡಿ ಗೌರವಿಸಿದ್ದಾರೆ. ವಿಶಾಲ ಹೃದಯಿ ಸದಾ ಹಸನ್ಮುಖಿಗಳಾದ ನಾಗೇಶ ಶೆಟ್ಟಿಯವರು ಮಾದರಿಯ ವ್ಯಕ್ತಿತ್ವದವರು. ಅವರ ಇಡೀ ಪರಿವಾರವೇ ಸಂಸ್ಕಾರ ಸಂಸ್ಕೃತಿಯ ಪ್ರತೀಕವಾಗಿದೆ. ಇಂದಿನ ಸಂದರ್ಭದಲ್ಲಿ ಇಂತಹ ಕುಟುಂಬ ಸಿಗುವುದು ಅಪರೂಪ. ಇವರು ನಮ್ಮೊಂದಿಗಿರುವುದು ನಮಗೆ ಅಭಿಮಾನದ ಸಂಗತಿ. ಇಂತಹ ಸ್ನೇಹಿತರನ್ನು ಪಡೆದ ನಾವು ಧನ್ಯರು. ಇವರು ೫೫ನೆಯ ವರ್ಷಕ್ಕೆ ಕಾಲಿಡುವ ಸಂದರ್ಭದಲ್ಲಿ ಸ್ನೇಹಿತರೆಲ್ಲ ಸೇರಿ ಇವರ ವ್ಯಕ್ತಿತ್ವದ ಕುರಿತು ಅಭಿನಂದನ ಗ್ರಂಥ ತರುತ್ತಿರುವುದು ಸಾರ್ಥಕದ ಕೆಲಸವಾಗಿದೆ. ನಾಗೇಶ ಮಾಲಕರಿಗೆ ಅವರ ಪರಿವಾರಕ್ಕೆ ದೇವರು ಸನ್ಮಂಗಲವನ್ನುಂಟು ಮಾಡಲಿ. ಆರೋಗ್ಯ ಭಾಗ್ಯ ಸಕಲೈಶ್ವರ್ಯ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುವೆ.

■■

ಹಿಂದಿ ವಿಭಾಗ, ಎಸ್.ಬಿ.ಕಲಾ
ಮತ್ತು ಕೆ.ಸಿ.ಪಿ.ವಿಜ್ಞಾನ ಮಹಾವಿದ್ಯಾಲಯ, ವಿಜಯಪುರ
ಮೊ. ೯೪೪೯೭೪೧೮೧೩

Scanned by CamScanner